2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ,
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ 110/2021

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಉಮೇಶ್ | ಪಿಡಬ್ಲೂ -2 |
| ತಂದೆಯ ಹೆಸರು | - | ಶಿವಣ್ಣ | ಸಿಡಬ್ಲೂ -2 |
| ವಯಸ್ಸು | - | 41 ವರ್ಷ | |
| ಉದ್ಯೋಗ | - | ಚಿಲ್ಲರೆ ವ್ಯಾಪಾರ | |
| ವಾಸ ಸ್ಥಳ | - | ಬೀರೂರು | |

ದಿನಾಂಕಃ 20.11.2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-

1. ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿ ಮಧು ಗೊತ್ತು, ಆತ ನಮ್ಮ ಊರಿನವನು ಮತ್ತು ನಮ್ಮ ಮತ್ತು ಆತನ ಜಮೀನು ಅಕ್ಕಪಕ್ಕದಲ್ಲಿ ಇವೆ. ಫ್ರಾಸಾ.1 ನನ್ನ ಅಣ್ಣ. ಚಾಸಾ.3 ನನ್ನ ಸೋದರತ್ತೆ. ಚಾಸಾ.4 ನನ್ನ ತಾಯಿ. ಚಾಸಾ.5 ರಿಂದ ಚಾಸಾ.7 ರವರು ಗೊತ್ತು.

2. ನಮ್ಮ ತಂದೆ ತಾಯಿಗೆ ಒಟ್ಟು ಇಬ್ಬರು ಮಕ್ಕಳು. ಅವರೆಂದರೆ ನಾನು ಮತ್ತು ಫ್ರಾಸಾ.1 ರವರು. ಬೀರೂರು ಕಾವಲ್ ನಲ್ಲಿ ನಮಗೆ ಸೇರಿದ 1 ಎಕರೆ 38 ಗುಂಟೆ ಜಮೀನು ಇದೆ. ಅದರ ಸರ್ವೆ ನಂಬರ್ 173/P1. ಸದರಿ ಜಮೀನಿನ ಪಕ್ಕದಲ್ಲಿ ಆರೋಪಿಯ ಭಾವನಾದ ಲಕ್ಷ್ಮಣ್ ರವರಿಗೆ ಸೇರಿದ ಜಮೀನು ಇದೆ. ಸದರಿ ಜಮೀನನ್ನು ಲಕ್ಷ್ಮಣ್ ರವರು ಖರೀದಿಸಿದ ಬಳಿಕ ಆರೋಪಿ ಮತ್ತು ಆತನ ಅಣ್ಣ ಪ್ರಕಾಶನಿಗೆ ಜಮೀನು ಇಲ್ಲದಂತಾಗಿ ಅವರು ಮೇಲೆ ಹೇಳಿದ ನಮ್ಮ ಜಮೀನಿನಲ್ಲಿ ಒಂದು ಎಕರೆಯನ್ನು ಒತ್ತುವರಿ ಮಾಡಿಕೊಂಡಿದ್ದರು. ಆ ವಿಚಾರಕ್ಕೆ ಆರೋಪಿ ಮತ್ತು ನಮ್ಮ ನಡುವೆ ತಕರಾರು ಇತ್ತು.

ಮೇಲೆ ಹೇಳಿದ ನಮ್ಮ ಜಮೀನನ್ನು ನಾನು, ನನ್ನ ಅಣ್ಣ, ಚಾಸಾ.3, ಚಾಸಾ.4 ಎಲ್ಲರೂ ಸೇರಿ ಉಳುಮೆ ಮಾಡಿಕೊಂಡಿದ್ದೆವು.

3. ನನ್ನ ಅತ್ತೆಯಾದ ಚಾಸಾ.3 ರವರು ಕಡೂರಿನಲ್ಲಿ ವಾಸವಾಗಿದ್ದಾರೆ. ಅವರು ದಿನಾಂಕ 14.05.2020 ರಂದು ನನಗೆ ಫೋನ್ ಮಾಡಿ ಕಡೂರಿನಿಂದ ಅವರಿಗೆ ಪರಿಚಯವಿದ್ದ ಪರಮೇಶ್ವರಪ್ಪರವರ ಟ್ರಾಕ್ಟರನ್ನು ತೆಗೆದುಕೊಂಡು ಮೇಲೆ ಹೇಳಿದ ಜಮೀನನ್ನು ಉಳುಮೆ ಮಾಡಲು ಬರುತ್ತಿರುವುದಾಗಿ ಹೇಳಿ ಎಲ್ಲರೂ ಸದರಿ ಜಮೀನಿನ ಹತ್ತಿರ ಬನ್ನಿ ಎಂದು ತಿಳಿಸಿದರು. ಆಗ ನಾನು, ನನ್ನ ಅಣ್ಣ ಮತ್ತು ತಾಯಿ ಜಮೀನಿನ ಹತ್ತಿರ ಹೋಗಿ ಚಾಸಾ.3 ರವರು ತೆಗೆದುಕೊಂಡು ಬಂದಿದ್ದ ಟ್ರಾಕ್ಟರ್ ನಿಂದ ಜಮೀನಿನನ್ನು ಉಳುಮೆ ಮಾಡಿಸಿದೆವು. ಸದರಿ ಟ್ರಾಕ್ಟರನ್ನು ಪರಮೇಶ್ವರಪ್ಪರವರೇ ಚಾಲನೆ ಮಾಡುತ್ತಿದ್ದರು. ನಂತರ ಡೀಸೆಲ್ ಖಾಲಿಯಾಗಿದ್ದರಿಂದ ಪರಮೇಶ್ವರಪ್ಪರವರು ಇನ್ನೂ ಸ್ವಲ್ಪ ಉಳುಮೆ ಮಾಡುವುದು ಬಾಕಿ ಇದೆ ಅದನ್ನು ಬೆಳಿಗ್ಗೆ ಬಂದು ಉಳುಮೆ ಮಾಡಿಕೊಡುತ್ತೇನೆ ಎಂದು ಹೇಳಿ ಹೊರಟು ಹೋದರು.

4. ಮಾರನೇ ದಿನ ಅಂದರೆ ದಿನಾಂಕ 15.05.2020 ರಂದು ಬೆಳಿಗ್ಗೆ 9.00 ರಿಂದ 9.30 ಗಂಟೆ ಸಮಯದಲ್ಲಿ ಚಾಸಾ.3 ರವರು ಪರಮೇಶ್ವರಪ್ಪರವರ ಟ್ರಾಕ್ಟರನ್ನು ತೆಗೆದುಕೊಂಡು ನಮ್ಮ ಜಮೀನಿನ ಹತ್ತಿರ ಬಂದರು. ಆಗ ನಾನು, ನನ್ನ ಅಣ್ಣ ಮತ್ತು ನಮ್ಮ ತಾಯಿ ಸದರಿ ಜಮೀನಿನ ಹತ್ತಿರ ಹೋಗಿ ಪರಮೇಶ್ವರಪ್ಪರವರ ಟ್ರಾಕ್ಟರ್ ನಿಂದ ಉಳುಮೆ

ಮಾಡಿಸುತ್ತಿದ್ದೆವು. ಆಗ ಆರೋಪಿ ಅಲ್ಲಿಗೆ ಬಂದು ಚಾಸಾ.3 ರವರನ್ನು ಕುರಿತು ಬೇವರ್ಸಿ ಮುಂಡೆ, ಸೂಳೆಮುಂಡೆ ನಮ್ಮ ಜಮೀನಿನ ಹತ್ತಿರ ಯಾಕೆ ಬಂದಿದ್ದೀಯಾ ಎಂದು ಬೈದು ಆಕೆಯ ಸೀರೆಯ ಬೌಸನ್ನು ಹರಿದನು. ಆಗ ಚಾಸಾ.3 ರವರಿಗೆ ಅವಮಾನವಾಯಿತು. ನಂತರ ಅಲ್ಲಿಯೇ ಬಿದ್ದಿದ್ದ ಅಡಿಕೆ ದಬ್ಬೆಯನ್ನು ಆರೋಪಿ ತೆಗೆದುಕೊಂಡು ಚಾಸಾ.3 ರವರ ಸೊಂಟ ಮತ್ತು ಬಲಕೈಗೆ ಹೊಡೆದನು. ಆಗ ಚಾಸಾ.3 ರವರು ಕೆಳಗೆ ಬಿದ್ದರು. ಆರೋಪಿ ಚಾಸಾ.3 ರವರ ಬೌಸನ್ನು ಹರಿದಿದ್ದರಿಂದ ಮತ್ತು ಅವರಿಗೆ ಅಡಿಕೆ ದಬ್ಬೆಯಿಂದ ಹೊಡೆದಿದ್ದರಿಂದ ನನ್ನ ಅಣ್ಣನಾದ ಫ್ರಾಸಾ.1 ರವರಿಗೆ ಅವಮಾನವಾದಾಂತಾಗಿ ಆರೋಪಿಯನ್ನು ಆ ಬಗ್ಗೆ ಪ್ರಶ್ನಿಸಲು ಹೋದನು. ಆಗ ಆರೋಪಿ ತನ್ನ ಕೈಯಲ್ಲಿದ್ದ ಅಡಿಕೆ ದಬ್ಬೆಯಿಂದ ಫ್ರಾಸಾ.1 ರವರ ಎಡಗಣ್ಣಿನ ಮೇಲ್ಭಾಗಕ್ಕೆ ಹೊಡೆದು ರಕ್ತಗಾಯಪಡಿಸಿದನು.

5. ಆಗ ಜಗಳವನ್ನು ಬಿಡಿಸಲು ಹೋದ ನನ್ನ ತಾಯಿಗೆ ಆರೋಪಿ ಬೇವರ್ಸಿ ಮುಂಡೆ, ಸೂಳೆಮುಂಡೆ ನಿನ್ನ ಮಕ್ಕಳಿಂದಲೇ ಈ ರೀತಿ ಆಗುತ್ತಿರುವುದು ಎಂದು ಹೇಳಿ ಆಕೆಯನ್ನು ಕೈಯಿಂದ ತಳ್ಳಿದನು. ಆಗ ನನ್ನ ತಾಯಿ ಕೆಳಗೆ ಬಿದ್ದಾಗ ಅವರ ಸೊಂಟಕ್ಕೆ ನೋವಾಯಿತು. ಆಗ ನಾನು ನನ್ನ ತಾಯಿಯನ್ನು ಎತ್ತಲು ಹೋದಾಗ ಆರೋಪಿ ಸೂಳೆಮಗನೇ, ಬೋಳಿಮಗನೇ, ನಿನ್ನಿಂದಲೇ ಈ ರೀತಿ ಆಗುತ್ತಿರುವುದು ನಿನ್ನನ್ನು ಕೊಲೆ ಮಾಡಿ ಇದೇ ಮಣ್ಣಿನಲ್ಲಿ ಊತು ಹಾಕುತ್ತೇನೆ ಎಂದು ಹೇಳಿ ಅಡಿಕೆ ದಬ್ಬೆಯಿಂದ ನನ್ನ ತಲೆಯ ಹಿಂಭಾಗಕ್ಕೆ ಮತ್ತು ಎಡಕೈಗೆ ಬಲವಾಗಿ ಹೊಡೆದನು. ಆರೋಪಿ ಹೊಡೆದಾಗ ನನ್ನ ತಲೆಯ

ಹಿಂಭಾಗದಲ್ಲಿ ಗಾಯವಾಗಿ ರಕ್ತ ಬಂದಿತು. ಆ ರೀತಿ ಗಲಾಟೆಯಾದ ಸ್ಥಳದಿಂದ ಸುಮಾರು 30-40 ಮೀಟರ್ ದೂರದಲ್ಲಿ ಪರಮೇಶ್ವರಪ್ಪ ಮತ್ತು ಮಹೇಶ್ ರವರು ಟ್ರಾಕ್ಟರ್ ನಲ್ಲಿ ಇದ್ದರು. ಆಗ ಮಹೇಶ್ ರವರು ಗಲಾಟೆಯನ್ನು ನೋಡಿ ನಮ್ಮ ಕಡೆಗೆ ಓಡಿ ಬಂದನು. ಪರಮೇಶ್ವರಪ್ಪ ಅಲ್ಲಿಯೇ ನಿಂತಿದ್ದನು. ನಂತರ ಚಾಸಾ.7 ಮಹೇಶ್ ರವರು ನವೀನ್ ಎಂಬುವವರಿಗೆ ಫೋನ್ ಮಾಡಿ ಆತನ ಆಟೋವನ್ನು ಸ್ಥಳಕ್ಕೆ ಕರೆಸಿದರು. ಅದರಲ್ಲಿ ನಾನು, ಫ್ರಾಸಾ.1, ಚಾಸಾ.3 ಮತ್ತು ಚಾಸಾ.4 ರವರು ಬೀರೂರು ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದುಕೊಂಡೆವು.

6. ನಂತರ ನನ್ನನ್ನು ಹೆಚ್ಚಿನ ಚಿಕಿತ್ಸೆಗಾಗಿ ಶಿವಮೊಗ್ಗದ ಸುಬ್ಬಯ್ಯ ಆಸ್ಪತ್ರೆಗೆ ಅದೇ ದಿನ ಚಾಸಾ.7 ಮತ್ತು ಚಾಸಾ.4 ರವರು ಕರೆದುಕೊಂಡು ಹೋದರು. ಸದರಿ ಆಸ್ಪತ್ರೆಯಲ್ಲಿ 7-8 ದಿನಗಳ ಕಾಲ ನಾನು ಒಳರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿದ್ದೇನೆ. ಆರೋಪಿ ಹೊಡೆದಿದ್ದರಿಂದ ನನ್ನ ಎಡಗೈನ ಎರಡು ಮೂಳೆಗಳು ಮುರಿದು ಹೋಗಿದ್ದವು. ಸದರಿ ಆಸ್ಪತ್ರೆಯಲ್ಲಿ ನನ್ನ ಎಡಗೈಗೆ ಶಸ್ತ್ರ ಚಿಕಿತ್ಸೆ ಮಾಡಿ ರಾಡನ್ನು ಹಾಕಲಾಯಿತು. ನನ್ನ ತಲೆಗೆ ಆಗಿದ್ದ ಗಾಯಕ್ಕೆ ಬೀರೂರು ಸರ್ಕಾರಿ ಆಸ್ಪತ್ರೆಯಲ್ಲಿ ಹೊಲಿಗೆ ಹಾಕಿದ್ದರು. ನಂತರ ಸುಬ್ಬಯ್ಯ ಆಸ್ಪತ್ರೆಯಲ್ಲಿ ನನ್ನ ತಲೆಯ ಸಿ ಟಿ ಸ್ಕ್ಯಾನ್ ಮಾಡಿಸಿದರು.

7. ಘಟನಾ ಸಮಯದಲ್ಲಿ ನಾನು ಕೇಸರಿ ಬಣ್ಣದ ಟೀ ಶರ್ಟನ್ನು ಧರಿಸಿದ್ದೆನು. ಆರೋಪಿ ನನ್ನ ತಲೆಗೆ ಅಡಿಕೆ ದಬ್ಬೆಯಿಂದ ಹೊಡೆದಾಗ ನನಗೆ ಗಾಯವಾಗಿ ರಕ್ತ ಬಂದಿತ್ತು. ಸದರಿ ರಕ್ತ

ನಾನು ಧರಿಸಿದ್ದ ಟೀ ಶರ್ಟಿನ ಮೇಲೆ ಬಿದ್ದಿತ್ತು. ನಾನು ಶಿವಮೊಗ್ಗದ ಸುಬ್ಬಯ್ಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಸಮಯದಲ್ಲಿ ಪೊಲೀಸರಿಗೆ ತನಿಖೆಗಾಗಿ ಕೊಡಬೇಕು ಎಂದು ಹೇಳಿ ಫ್ರಾಸಾ.1 ರವರು ಸದರಿ ಶರ್ಟನ್ನು ನನ್ನಿಂದ ಪಡೆದುಕೊಂಡು ಹೋಗಿ ಪೊಲೀಸರಿಗೆ ಕೊಟ್ಟಿರುತ್ತಾರೆ.

8. ಸದರಿ ಶರ್ಟನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಈಗಾಗಲೇ ಮು.ಮಾ.3 ಎಂದು ಗುರುತಿಸಲ್ಪಟ್ಟಿರುವ ಟೀ ಶರ್ಟನ್ನು ನೋಡಿ ಘಟನಾ ಸಮಯದಲ್ಲಿ ನಾನು ಧರಿಸಿದ್ದ ರಕ್ತದ ಕಲೆಗಳಾಗಿದ್ದ ಟೀ ಶರ್ಟ್ ಅದೇ ಎಂದು ನುಡಿದಿರುತ್ತಾರೆ. ನನ್ನ ಎಡಕೈಗೆ ಪೆಟ್ಟಾಗಿದ್ದರಿಂದ ಸದರಿ ಟೀ ಶರ್ಟನ್ನು ವೈದ್ಯರು ಕತ್ತರಿಸಿ ತೆಗೆದಿರುತ್ತಾರೆ.

9. ಆ ದಿನ ಆರೋಪಿ ನನಗೆ, ಫ್ರಾಸಾ.1 ಮತ್ತು ಚಾಸಾ.3 ರವರಿಗೆ ಹಲ್ಲೆ ಮಾಡಲು ಬಳಸಿದ್ದ ಅಡಿಕೆ ದಬ್ಬೆಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಈಗಾಗಲೇ ಮು.ಮಾ.1 ಎಂದು ಗುರುತಿಸಲ್ಪಟ್ಟಿರುವ ಅಡಿಕೆ ದಬ್ಬೆಯನ್ನು ನೋಡಿ ಆರೋಪಿ ನನಗೆ, ಫ್ರಾಸಾ.1 ಮತ್ತು ಚಾಸಾ.3 ರವರಿಗೆ ಹಲ್ಲೆ ಮಾಡಲು ಬಳಸಿದ್ದ ಅಡಿಕೆ ದಬ್ಬೆ ಅದೇ ಎಂದು ನುಡಿದಿರುತ್ತಾರೆ. ಸದರಿ ಅಡಿಕೆ ದಬ್ಬೆಯನ್ನು ನಮ್ಮ ಜಮೀನಿಗೆ ಬರುವ ದನಕರು ಮತ್ತು ನಾಯಿಗಳನ್ನು ಓಡಿಸಲು ನಾವೇ ನಮ್ಮ ಜಮೀನಿನಲ್ಲಿ ಇಟ್ಟಿದ್ದೆವು.

10. ಸಾಕ್ಷಿಯು ಈಗಾಗಲೇ ನಿಪಿ.4 ಮತ್ತು ನಿಪಿ.5 ಎಂದು ಗುರುತಿಸಲ್ಪಟ್ಟಿರುವ ಫೋಟೋಗಳನ್ನು ತೋರಿಸಲಾಗಿ ಅವುಗಳಲ್ಲಿ ಮೇಲೆ ಹೇಳಿದಂತೆ ಕೃತ್ಯ ನಡೆದ ಸ್ಥಳ ಕಂಡು ಬರುವುದಾಗಿ ನುಡಿದಿರುತ್ತಾರೆ. ಸಾಕ್ಷಿಗೆ 6 ಫೋಟೋಗಳನ್ನು

ತೋರಿಸಲಾಗಿ ಅವುಗಳಲ್ಲಿ ತನ್ನ ಇರುವಿಕೆಯನ್ನು ನೋಡಿ ಗುರುತಿಸಿ ಅವು ನಾನು ಬೀರೂರು ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಸಮಯದಲ್ಲಿ ತೆಗೆದ ಫೋಟೋಗಳು ಎಂದು ನುಡಿದಿರುತ್ತಾರೆ. ಸದರಿ ಫೋಟೋಗಳನ್ನು ನಿಪಿ.8 ರಿಂದ ನಿಪಿ.13 ಎಂದು ಗುರುತಿಸಲಾಯಿತು. ಸದರಿ ಫೋಟೋಗಳಲ್ಲಿ ಮೇಲೆ ಹೇಳಿದಂತೆ ನನ್ನ ತಲೆಯ ಹಿಂಭಾಗದಲ್ಲಿ ಆದ ರಕ್ತ ಗಾಯ ಮತ್ತು ಎಡಕೈಗೆ ಆದ ಗಾಯಕ್ಕೆ ಬ್ಯಾಂಡೇಜ್ ಹಾಕಿರುವುದು ಕಂಡು ಬರುತ್ತದೆ.

11. ದಿನಾಂಕ 22.05.2020 ರಂದು ನಾನು ಶಿವಮೊಗ್ಗದ ಸುಬ್ಬಯ್ಯ ಆಸ್ಪತ್ರೆಯಿಂದ ಬಿಡುಗಡೆಗೊಂಡಿರುತ್ತೇನೆ. ಪೊಲೀಸರು ನನ್ನನ್ನು ವಿಚಾರಣೆಗೆ ಬರುವಂತೆ ಕರೆದಿದ್ದರು ಆದರೆ ನಾನು ಆಸ್ಪತ್ರೆಗೆ ಚಿಕಿತ್ಸೆಗಾಗಿ ಅಡ್ಡಾಡುತ್ತಿದ್ದುದ್ದರಿಂದ ವಿಚಾರಣೆಗೆ ಹೋಗಲು ಸಾಧ್ಯವಾಗಿರಲಿಲ್ಲ. ನಂತರ 2020 ನೇ ಇಸವಿ ಆಗಸ್ಟ್ ತಿಂಗಳಿನಲ್ಲಿ ತಾರೀಖು 20 ಅಥವಾ ನಂತರದ ದಿನಗಳಲ್ಲಿ ನಾನು ಬೀರೂರು ಪೊಲೀಸ್ ಠಾಣೆಗೆ ಹೋದೆನು. ಆಗ ಅಲ್ಲಿ ಪೊಲೀಸರು ವಿಚಾರಿಸಿದ ಮೇರೆಗೆ ನಡೆದ ವಿಚಾರವನ್ನು ಅವರಿಗೆ ತಿಳಿಸಿ ಹೇಳಿಕೆಯನ್ನು ನೀಡಿರುತ್ತೇನೆ.

12. ಶಿವಮೊಗ್ಗದ ಸುಬ್ಬಯ್ಯ ಆಸ್ಪತ್ರೆಯವರು ನೀಡಿದ ಡಿಸ್ಚಾರ್ಜ್ ಸಮ್ಮರಿ, X-Ray ಗಳು, CT scan ವರದಿ ಮತ್ತು ಇತರೆ ವೈದ್ಯಕೀಯ ವರದಿಗಳ ಜೆರಾಕ್ಸ್ ಪ್ರತಿಗಳನ್ನು ಪೊಲೀಸರಿಗೆ ಕೊಟ್ಟಿದ್ದೆನು. ಅವುಗಳ ಮೂಲ ದಾಖಲೆಗಳು ನನ್ನ ಬಳಿಯೇ ಇದ್ದವು ನಂತರ ಅವುಗಳನ್ನು ಸರ್ಕಾರಿ ಅಭಿಯೋಜಕರ ಮೂಲಕ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

**(ಪಾಟೀ ಸವಾಲು: ಆರೋಪಿ ಪರ ವಕೀಲರು ಪ್ರತ್ಯಕ್ಷ ಸಾಕ್ಷಿದಾರರು ಎಂದು ಅಂತಿಮ ವರದಿಯಲ್ಲಿ ನಮೂದಿಸಿರುವ ಸಾಕ್ಷಿದಾರರ ವಿಚಾರಣೆಯಾಗುವವರೆಗೆ ಪ್ರಸುತ ಸಾಕ್ಷಿಯ ಪಾಟೀ ಸವಾಲಿಗೆ ಸಮಯಾವಕಾಶ ಕೋರಿ ಸಲ್ಲಿಸಿದ ಅರ್ಜಿಯನ್ನು ನ್ಯಾಯಾಲಯವು ಈ ಹಿಂದೆ ಪುರಸ್ಕರಿಸಿರುವ ಕಾರಣ ಸಾಕ್ಷಿಯ ಪಾಟೀ ಸವಾಲನ್ನು ಮುರಿದೂಡಲಾಯಿತು.)**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

(ಭಾನುಮತಿ ಬಿ.ಸಿ)

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಸಾಕ್ಷಿಯ ಸಹಿ

ಚಿಕ್ಕಮಗಳೂರು.